ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.
ಸಿ.ಸಿ. ಸಂಖ್ಯೆಃ **72/2019**

| | | |
|---|---|---|
| ಹೆಸರುಃ | ರಾಮಶೆಟ್ಟಿ | **ಪಿಡಬ್ಲ್ಯೂ -02** ~~ಸಿಡಬ್ಲ್ಯೂ -03~~ |
| ತಂದೆಃ | ಮರಿಶೆಟ್ಟಿ | ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾದ ದಿನಾಂಕಃ **15.03.2021.** |
| ವಯಸ್ಸುಃ | **68** ವರ್ಷ | |
| ಕೆಲಸಃ | ನಿವೃತ್ತ ಕೆಇಬಿ ನೌಕರರು | |
| ವಾಸಸ್ಥಳಃ | ಹುಣಸೂರು. | |

ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ ಸಾಕ್ಷಿಗೆ ನಿಪಿ **1** ಅನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ **1** ಬಿ ಎಂದು ಗುರುತಿಸಲಾಯಿತು. ಸುಮಾರು ಒಂದು ವರ್ಷದ ಹಿಂದೆ ಚಾಸಾ **1** ರವರ ಮನೆಯ ಮುಂದೆ ನಿಪಿ **1** ಕ್ಕೆ ಸಹಿ ಮಾಡಿರುತ್ತೇನೆ. ನಿಪಿ **1** ರ ವಿಚಾರಗಳು ಗೊತ್ತಿಲ್ಲ. ನನ್ನೊಂದಿಗೆ ಚಾಸಾ **2** ರವರು ಸಹಿ ಮಾಡಿರುತ್ತಾರೆ. ನನ್ನ ಸಮಕ್ಷಮ ಪೊಲೀಸರು ಮಹಜರ್ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅ.ರವರಿಂದಃ ದಿಃ **24-04-2018** ರಂದು ಪೊಲೀಸರು ಘಟನಾ ಸ್ಥಳದಲ್ಲಿ ಹಾಜರಿದ್ದು ಚಾಸಾ **1** ರವರು ತೋರಿಸಿಕೊಟ್ಟ ಸ್ಥಳವನ್ನು ಮಧ್ಯಾಹ್ನ **1** ರಿಂದ **1.45** ರವರೆಗೆ ಪರಿಶೀಲಿಸಿ ನಿಪಿ **1** ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ ನಿಪಿ **1** ರ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.